ಟ್ರಾಕ್ಟರ್ ಸಹಾಯಧನ ಸ್ಥಗಿತಗೊಳಿಸಿರುವ ಕುರಿತು

987 (845) ಶ್ರೀ ಪಾಟೀಲ್ ಎಂ.ಬಿ (ಬಬಲೇಶ್ವರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ 2009–10, 2010–11 ಮತ್ತು 2011–12ನೇ ಸಾಲಿನಲ್ಲಿ ಹೈಟೆಕ್ ಯೋಜನೆಯಡಿ ಟ್ರ್ಯಾಕ್ಟರ್ ಸಹಾಯಧನ ಸಲುವಾಗಿ ಬಂದ ಅರ್ಜಿಗಳೆಷ್ಟು;

ಆ) ಇವುಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ (ವಿವರವಾದ ಮಾಹಿತಿ ನೀಡುವುದು);

ಇ) ಟ್ರ್ಯಾಕ್ಟರ್ ಸಹಾಯಧನ ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಉದ್ದೇಶಕ್ಕಾಗಿ ಸ್ಥಗಿತಗೊಳಿಸಲಾಗಿದೆ;

ಈ) ಸ್ಥಗಿತಗೊಳಿಸಿದ್ದಲ್ಲಿ ಪುನಃ ಟ್ರ್ಯಾಕ್ಟರ್ ಸಹಾಯಧನ ನೀಡಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಉಮೇಶ್ ವಿ.ಕತ್ತಿ (ಕೃಷಿ ಸಚಿವರು) :

ಅ) 2009–10ನೇ ಸಾಲಿನಲ್ಲಿ ವಿಜಾಪುರ ಜಿಲ್ಲೆಯಲ್ಲಿ ಹೈಟೆಕ್ ಯೋಜನೆಯಡಿ ಟ್ರ್ಯಾಕ್ಟರ್ ಸಹಾಯಧನ ಕೋರಿ 319 ಅರ್ಜಿಗಳು ಸ್ವೀಕೃತವಾಗಿರುತ್ತವೆ. 2010–11ನೇ ಸಾಲಿನಿಂದ ಟ್ರಾಕ್ಟರ್‌ಗಳಿಗೆ ಸಹಾಯಧನ ನೀಡುವುದನ್ನು ಸ್ಥಗಿತಗೊಳಿಸಲಾಗಿರುತ್ತದೆ. 2011–12ನೇ ಸಾಲಿನಲ್ಲಿಯೂ ಸಹ ಟ್ರ್ಯಾಕ್ಟರ್‌ಗೆ ಸಹಾಯಧನ ನೀಡುವುದನ್ನು ಸ್ಥಗಿತಗೊಳಿಸಿರುವುದನ್ನು ಮುಂದು ವರೆಸಲಾಗಿರುತ್ತದೆ. ಆದ ಪ್ರಯುಕ್ತ 2010–11 ಹಾಗೂ 2011–12ನೇ ಸಾಲಿನಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗಿರುವುದಿಲ್ಲ.

During the year 2009-10, in Bijapur district 319 applications were received for tractor subsidy. The subsidy for tractors has been withheld from 2010-11 and the withholding has been continued in 2011-12 also. Hence, no applications have been received for the years 2010-11 and 2011-12.

ಆ) 2009–10 ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ 38 ಫಲಾನುಭವಿಗಳಿಗೆ ಟ್ರ್ಯಾಕ್ಟರ್‌ಗೆ ಸಹಾಯಧನ ನೀಡಲಾಗಿದೆ. ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ.

Tractor subsidy was provided for 38 beneficiaries in Bijapur district during 2009-10, Talukwise details are as follows:

ಕ್ರ ಸಂ. **Sl. No**	ತಾಲ್ಲೂಕು **/ Taluk**	ಟ್ರ್ಯಾಕ್ಟರ್‌ಗೆ ಸಹಾಯಧನ ಪಡೆದ ಫಲಾನುಭವಿಗಳ ಸಂಖ್ಯೆ **No. of beneficiaries under subsidy for tractors**
1	ಬಿಜಾಪುರ **/ Bijapur**	8
2	ಬ.ಬಾಗೇವಾಡಿ / **B.Bagewadi**	10
3	ಇಂಡಿ **/ Indi**	5
4	ಮುದ್ದೆಬಿಹಾಳ / **Muddebihala**	6
5	ಸಿಂದಗಿ **/ Sindagi**	9
	ಒಟ್ಟು	38

ಹೌದು. ಟ್ರ್ಯಾಕ್ಟರ್‌ಗಳಿಗೆ ಸಹಾಯಧನವನ್ನು ನೀಡಿದ್ದಲ್ಲಿ, ಆಯವ್ಯಯದ ಹೆಚ್ಚಿನ ಅನುದಾನವನ್ನು ಈ ಒಂದೇ ಘಟಕಕ್ಕೆ ವಿನಿಯೋಗಿಸ ಬೇಕಾಗುತ್ತದೆಯೇ ಹೊರತು ಇತರೇ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಲ್ಲಿ ವಿತರಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕಾಗಿ ಟ್ರ್ಯಾಕ್ಟರ್‌ಗಳಿಗೆ ಸಹಾಯಧನವನ್ನು ಸ್ಥಗಿತಗೊಳಿಸಲಾಗಿದೆ.

Yes. If tractors are permitted under subsidy, most of the budgetary outlay will go for Providing subsidy to tractors only. In order to encourage other agriculture implements, the subsidy for tractor is withheld.

ಈ) ಇಲ್ಲ.

No.